# ಪ್ರೇತಗಳ ವಿವಾಹವಿದು



ಮೃತ ತರುಣ ತರುಣಿಯರ ಪ್ರೇತಗಳನ್ನು ಆಹ್ವಾನಿಸಿ ಪ್ರೇತಾತ್ಮಗಳ ವಿವಾಹವನ್ನು ನೆರವೇರಿಸಲಾಗುತ್ತದೆ. ಆಹ್ವಾನಿತ ಪ್ರೇತಗಳನ್ನು ಬೆಳ್ಳಿ ಮೂರ್ತಿಯಾಗಿ ಪ್ರತಿಷ್ಠಾಪಿಸಲಾಗುತ್ತದೆ.

■ **ಉದಯಕುಮಾರ ಹಬ್ಬು**

ತುಳುನಾಡಿನಲ್ಲಿರುವ ಪ್ರಾಚೀನ ಜಾನಪದ ಸಂಪ್ರದಾಯ 'ಪ್ರೇತವಿವಾಹ' ಅಥವಾ 'ಕುಲೆ ಮದ್ಮೆ'. ಆ ದಿನ ನಾನು ಬೆಳಿಗ್ಗೆ ತರಕಾರಿ ತರಲು ಮಾರ್ಕೆಟ್‌ಗೆ ಹೊರಟಾಗ ಒಬ್ಬ ಯುವಕ ಕೈಯಲ್ಲಿ ತೆಂಗಿನ ಗಿಡವನ್ನು ಹಿಡಿದುಕೊಂಡು ಹೋಗುತ್ತಿದ್ದ. ಕುತೂಹಲ ತಡೆಯಲಾಗದೆ ಕೇಳಿದೆ: 'ಇದು ಎಲ್ಲಿಗೆ? ಯಾಕೆ?'.

'ಇದು ನಮ್ಮಲ್ಲಿ ನಡೆಯುವ ಪ್ರೇತವಿವಾಹಕ್ಕೆ ಬೇಕು, ಜೊತೆಯಲ್ಲಿ ಎರಡು ಬಾಳೆಗಿಡಗಳು' ಎಂದ. ನನ್ನ ಮುಂದಿನ ಪ್ರಶ್ನೆ – 'ಇದನ್ನು ಯಾಕೆ ಮಾಡುತ್ತಾರೆ?'. ಅವನು ಉತ್ತರಿಸಿದ: 'ಕೆಲವು ಸಲ ಮನೆಯಲ್ಲಿ ಮದುವೆಯಾಗದೆ ಹುಡುಗಿ ಮರಣವನ್ನಪ್ಪುತ್ತಾಳೆ. ಸಾಯುವಾಗ ಮದುವೆಯ ಆಸೆ ಇಟ್ಟುಕೊಂಡೇ ಸತ್ತಿರುತ್ತಾಳೆ. ಅದೇ ರೀತಿ ಯಾವುದೋ ಮನೆಯಲ್ಲಿ ಹುಡುಗನೂ ಮದುವೆ ಆಸೆ ಇಟ್ಟುಕೊಂಡೇ ಸತ್ತಿರುತ್ತಾನೆ. ಹೀಗೆ ಅವರಿಬ್ಬರೂ ಅತೃಪ್ತ ಆತ್ಮಗಳಾಗಿ ಪ್ರೇತಗಳಾಗುತ್ತಾರೆ. ಇದರಿಂದ ಆ ಪ್ರೇತಾತ್ಮಗಳು ಮನೆಯವರಿಗೆ ನಾನಾ ರೀತಿಯ ಕಿರುಕುಳ ಕೊಡುತ್ತಾರೆ. ಇದರ ಪರಿಹಾರಾರ್ಥವಾಗಿ ಪ್ರೇತವಿವಾಹಗಳನ್ನು ಅಂದರೆ ಕುಲೆ ಮದ್ಮೆಗಳನ್ನು ನಡೆಸಲಾಗುತ್ತದೆ'.

ಪ್ರೇತಾತ್ಮಗಳ ಮದುವೆಯ ಬಗ್ಗೆ ಹುಡುಗ ನೀಡಿದ ಮಾಹಿತಿಗಳು ಕುತೂಹಲಕರವಾಗಿದ್ದವು. ಮೃತ ತರುಣ ತರುಣಿಯರ ಪ್ರೇತಗಳನ್ನು ಆಹ್ವಾನಿಸಿ ಪ್ರೇತಾತ್ಮಗಳ ವಿವಾಹವನ್ನು ನೆರವೇರಿಸಲಾಗುತ್ತದೆ. ಆಹ್ವಾನಿತ ಪ್ರೇತಗಳನ್ನು ಬೆಳ್ಳಿ ಮೂರ್ತಿಯಾಗಿ ಪ್ರತಿಷ್ಠಾಪಿಸಲಾಗುತ್ತದೆ. ಸಂಪ್ರದಾಯದಂತೆ ವಿವಾಹ ಸಮಾರಂಭ ನಡೆಯುತ್ತದೆ. ವಧು–ವರರ ಪರವಾಗಿ ಪ್ರೇತಾತ್ಮಗಳ ಮನೆಯ ಹಿರಿಯರೇ ಹೂಮಾಲೆಗಳನ್ನು ಹಾಕುವ ಶಾಸ್ತ್ರ ನಡೆಸುತ್ತಾರೆ. ಮಾಂಗಲ್ಯಧಾರಣೆಯೂ ನಡೆಯುತ್ತದೆ. ಮತ್ತೆ ಔತಣಕೂಟ ಹೆಣ್ಣಿನ ಮನೆಯಲ್ಲಿ. ಆಮೇಲೆ ಆ ಪ್ರೇತಾತ್ಮಗಳ ಮನೆಯವರು ನೆಂಟರಾಗುತ್ತಾರೆ. ವೈದಿಕ ಸಂಪ್ರದಾಯದ ಪ್ರಕಾರ ಪುರೋಹಿತರು ಮದುವೆಯನ್ನು ನಡೆಸಿಕೊಡುತ್ತಾರೆ. ಮದುವೆಯ ನಂತರ ತೆಂಗಿನ ಸಸಿಗಳನ್ನು, ಬಾಳೆಗಿಡಗಳನ್ನು, ಬೆಳ್ಳಿ ಪಾತ್ರೆಗಳನ್ನು ಸಮುದ್ರದಲ್ಲಿ ವಿಸರ್ಜಿಸಲಾಗುತ್ತದೆ. ಹುಡುಗನ ಮತ್ತು ಹುಡುಗಿಯ ಕಡೆಯವರು ಏನಿಲ್ಲ ಅಂದರೂ 50–60 ಜನ ಸೇರುತ್ತಾರೆ.

ಪ್ರೇತಾತ್ಮಗಳನ್ನು ಅಘೋರ ಹವನದ ಮೂಲಕ ಆಹ್ವಾನಿಸಲಾಗುತ್ತದೆ. ಆ ಕ್ರಿಯೆಗೆ ಐದು ಜನ ಪುರೋಹಿತರು ಬೇಕು. ಅಂದು ಕನಿಷ್ಠ 20 ಸಾವಿರ ರೂಪಾಯಿಯ ಖರ್ಚು. ವೈದಿಕ ಸಂಪ್ರದಾಯದ ಪ್ರಕಾರ ಈ ವಿವಾಹ ನೆರವೇರುತ್ತದೆ. ಬ್ರಾಹ್ಮಣರಿಲ್ಲದ ಕಡೆ ಸಮಾಜದ ಗುರಿಕಾರರು ಮತ್ತು ಹುಡುಗ–ಹುಡುಗಿಯ ಮನೆಯವರು ಈ ವಿವಾಹ ನಡೆಸಿಕೊಡುತ್ತಾರೆ. ಗುರಿಕಾರ ಪ್ರೇತಗಳನ್ನು ಹೆಸರು ಹಿಡಿದು ಕರೆಯುತ್ತಾನೆ. ಆಗ ಮನೆಯವರು ಧಾರೆಯೆರೆದು ಮದುವೆಯನ್ನು ನಡೆಸಿಕೊಡುತ್ತಾರೆ.

ನನಗೆದುರಾದ ಹುಡುಗ ಭಾಗವಹಿಸುತ್ತಿದ್ದ ಕಾರ್ಯಕ್ರಮದಲ್ಲಿ ನಾಲ್ಕು ಜೋಡಿಗಳ ವಿವಾಹ ನಡೆಯುತ್ತಿತ್ತು. ಎಂಟು ಕುಟುಂಬದವರು ಸೇರಿದ್ದ ಆ ಕಾರ್ಯಕ್ರಮದಲ್ಲಿ, ಮದುವೆಯ ಖರ್ಚನ್ನು ಎಲ್ಲರೂ ಸರಿಸಮಾನವಾಗಿ ಹಂಚಿಕೊಂಡಿದ್ದರು.

ಪ್ರೇತ ವಿವಾಹದ ಬಗ್ಗೆ ನಾನು ಗೆಳೆಯರೊಂದಿಗೆ ಹಂಚಿಕೊಂಡಾಗ ಅವರಿಂದ ದೊರೆತ ಪ್ರತಿಕ್ರಿಯೆಗಳೂ ಭಿನ್ನವಾಗಿದ್ದವು. 'ನಮ್ಮೂರಲ್ಲೂ ಈ ಆಚಾರ ಇದೆ. ಅವರವರ ಜಾತಿ ಸಂಪ್ರದಾಯದಂತೆ ವಿವಾಹ ನೆರವೇರಿಸುತ್ತಾರೆ. ಬ್ರಾಹ್ಮಣರು ಬರುವ ಪದ್ಧತಿ ಇಲ್ಲ. ಯಾವಾಗ ಆ ಮನೆಯಲ್ಲಿ ತೊಂದರೆಗಳು, ಅಂದರೆ ಮನೆಯಲ್ಲಿ ಸತ್ತು ಹೋದ ಹುಡುಗ–ಹುಡುಗಿಯರ ತಮ್ಮ–ತಂಗಿಯರಿಗೆ ಮದುವೆ ನಿಶ್ಚಯವಾದಾಗ ಹಿರಿಯರಿಗೆ ಅಪರಾಧಿ ಪ್ರಜ್ಞೆ ಕಾಡುತ್ತದೆ. ಸತ್ತ ಹಿರಿಯ ಮಗ–ಮಗಳಿಗೆ ಮದುವೆಯಾಗದೆ ಕಿರಿಯರಿಗೆ ಹೇಗೆ ಮದುವೆ ಮಾಡಿಸುವುದು? ಜ್ಯೋತಿಷ್ಯರು ಇದಕ್ಕೆ ಪರಿಹಾರವಾಗಿ 'ಕುಲೆಕ್ಕುಲ್ನ ಮದ್ಮೆ' ಸೂಚಿಸುತ್ತಾರೆ' ಎಂದು ಒಬ್ಬರು ಹೇಳಿದರು.

ತುಳುವರು ಹಿಂದಿನ ಕಾಲದಿಂದಲೇ ಜ್ಯೋತಿಷ್ಯದ ನೆರವು ಇಲ್ಲದೆಯೂ ಕುಲೆ ಮದ್ಮೆ ನಡೆಸತ್ತಿದ್ದಾರೆ. ಇತ್ತೀಚೆಗೆ ಜ್ಯೋತಿಷ್ಯದ, ವೈದಿಕದ ಅತಿ ಅವಲಂಬನೆ ಮಾಡುತ್ತಿದ್ದಾರೆ. ಕಾರಣ ಅನುಭವಿ ಹಿರಿಯರ ಸಂಖ್ಯೆ ಕಡಿಮೆಯಾಗಿರುವುದು. ಪ್ರೇತ ಉಚ್ಚಾಟನೆಯ ಪ್ರಕ್ರಿಯೆಯೂ ಜಾಸ್ತಿ ಆಗುತ್ತಿದೆ. ಪ್ರೇತಗಳ ಉಚ್ಚಾಟನಾದಿ ಪ್ರಕ್ರಿಯೆಗಳಿಗೆ ಆ ವಿದ್ಯೆ ಕಲಿತವರೇ ಆಗಿರಬೇಕು. ಮದುವೆಗೆ ಕುಟುಂಬದವರೇ ಸಾಕು ಎಂದೊಬ್ಬರು ಹೇಳಿದರೆ – ಹಿರಿಯ ವಿದ್ವಾಂಸ ಪುರುಷೋತ್ತಮ ಬಿಳಿಮಲೆಯವರು, 'ಕರಾವಳಿ ಜನಪದದಲ್ಲಿ ಒಂದಷ್ಟು ವಿವರಗಳಿವೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಡಾ. ಲಕ್ಷ್ಮಿ ವಿ. ಒಬ್ಬ ಜನಪದ ವಿದ್ವಾಂಸರು. ಅವರ ಪ್ರಕಾರೆ, 'ಕುಲೆ ಮದ್ಮೆ ತುಳುವರಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ಸಿರಿ ಪಾಡ್ದನದಲ್ಲಿ ಸಿರಿಯ ಮೊಮ್ಮಕ್ಕಳಾದ ಅಬ್ಬಗ ದಾರಗರು ಮರಣವನ್ನಪ್ಪಿ ಕುಲೆಗಳಾಗಿ ಅವರಿಗೆ ಕುಲೆ ಮದ್ಮೆ ಮಾಡುವ ಬಗ್ಗೆ ಮಾಹಿತಿ ಇದೆ.' ■